**ಪಿಡಬ್ಲು - 1**

**ಅರ್ಜಿಯ ಆದೇಶದ ಮೇರೆಗೆ, ಪಿಡಬ್ಲು-1 ಲಕ್ಷ್ಮವ್ವ ಲಗಳಿ ರವರನ್ನು ರೂ. 600/- ಗಳ ಖರ್ಚಿನ ಮೇರೆಗೆ ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು - 09.06.2023**

**ಪಾಟಿ ಸವಾಲುಃ ಶ್ರೀ ಎಂ.ಬಿ. ಗುಂಡವಾಡೆ, ಆರೋಪಿತರ ಪರ ವಕೀಲರಿಂದಃ**

7. ನನ್ನ ಮದುವೆಯಾಗಿ 13 -14 ವರ್ಷಗಳಾಗಿರುತ್ತವೆ. ಮೊದಲಿಗೆ ನನ್ನ ಮದುವೆ ನಂತರ ಮೃತ ಮಲ್ಲಪ್ಪನ ಮದುವೆ ಆ ನಂತರ ಚಾಸಾ-21 ರವರ ಮದುವೆಯಾಗಿರುತ್ತದೆ. 1 ನೇ ಆರೋಪಿಯು ಮೃತ ನೀಲವ್ವಳ ಸೋದರ ಮಾವನ ಮಗ ಇರುತ್ತಾನೆ. 1 ನೇ ಆರೋಪಿಯನ್ನು ಮೃತ ನೀಲವ್ವಳ ತಂದೆ ಶಿವಪ್ಪ ಇವರು ದತ್ತಕ ತೆಗೆದುಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನ್ಯಾಯಾಲಯದಲ್ಲಿ ಕೂಡಾ 1 ನೇ ಆರೋಪಿಯು ಸದರಿ ಶಿವಪ್ಪ ಇವರ ದತ್ತಕ ಪುತ್ರ ಎಂದು ಡಿಕ್ರೀ ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. 1 ನೇ ಆರೋಪಿಯ ಜಮೀನನ್ನು ನಮ್ಮ ಮನೆಯವರಾಗಲೀ ಅಥವಾ ಮೃತ ನೀಲವ್ವ ಇವರ ಮನೆಯವರಾಗಲೀ ಉಳುಮೆ ಮಾಡಿರಲಿಲ್ಲ. ಸದರಿ ಶಿವಪ್ಪನ ಮನೆ ಮತ್ತು ಟ್ರ್ಯಾಕ್ಟರನ್ನು 1 ನೇ ಆರೋಪಿಯೇ ಉಪಯೋಗ ಮಾಡುತ್ತಿದ್ದಾನೆ ಎಂದರೆ ಸರಿ.

8. ಮೃತ ನೀಲವ್ವಳ ತಂದೆ ಶಿವಪ್ಪ ಮೃತಪಟ್ಟು ಈಗ 8 ವರ್ಷಗಳಾಗಿರುತ್ತವೆ. ಸದರಿ ಶಿವಪ್ಪನ ಜಮೀನಿನಲ್ಲಿ 1 ನೇ ಆರೋಪಿಯು ಯಾವ ಬೆಳೆಯನ್ನು ಬೆಳೆಯುತ್ತಿದ್ದಾನೆ ಎಂದು ನಾನು ವಿಚಾರ ಮಾಡಲು ಹೋಗಿರುವುದಿಲ್ಲ.

9. ಸದರಿ ಮೃತ ನೀಲವ್ವಳಿಗೆ ಲೋಕಪ್ಪ ಎಂಬುವವರು ಸಹಾಯ ಮಾಡುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ಮೃತ ನೀಲವ್ವ ನ್ಯಾಯಾಲಯಕ್ಕೆ ಮತ್ತು ತಹಶೀಲ್ದಾರರ ಕಚೇರಿಗೆ ತನ್ನ ಮಕ್ಕಳನ್ನು ಕರೆದುಕೊಂಡು ಹೋಗುತ್ತಿದ್ದಳು. ಮೃತ ನೀಲವ್ವಳು 1 ನೇ ಆರೋಪಿಯ ವಿರುದ್ಧ ನ್ಯಾಯಾಲಯದಲ್ಲಿ ದಾವೆಯನ್ನು ಹೂಡಿದ್ದಾಳೆಯೇ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ಹೇಳಿರುತ್ತಾರೆ. ಮೃತ ನೀಲವ್ವಳು ತಹಶೀಲ್ದಾರರ ಕಚೇರಿಗೆ ಆಸ್ತಿಗೆ ಸಂಬಂಧಿಸಿದಂತೆ ಹೋಗುತ್ತಿದ್ದಳು. ಮೃತ ನೀಲವ್ವಳಿಗೆ ಸಂಬಂಧಿಸಿದಂತೆ ತಹಶೀಲ್ದಾರರ ಕಚೇರಿಯಲ್ಲಿ ಯಾವುದೇ ಆದೇಶ ಆಗಿರುವುದಿಲ್ಲ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ಹೇಳಿರುತ್ತಾರೆ.

10. ನನ್ನ ಗಂಡ ಮತ್ತು ಆತನ ಸಹೋದರರು ಒಟ್ಟು ಕುಟುಂಬದಲ್ಲಿ ವಾಸ ಮಾಡಿಕೊಂಡಿದ್ದಾರೆ. ನಮ್ಮ ಮನೆಯ ಹಿರಿತನವನ್ನು ಮೃತ ನೀಲವ್ವ ನೋಡಿಕೊಳ್ಳುತ್ತಿದ್ದಳು. ಮೃತ ನೀಲವ್ವ ಹೊರಗೆ ಹೋದಾಗ ನಮ್ಮ ಮಾವನವರು ಮನೆಯ ಹಿರಿತನವನ್ನು ನೋಡಿಕೊಳ್ಳುತ್ತಿದ್ದರು.

11. ಘಟನೆ ನಡೆದಾಗ ನಾನು ಬೊಮ್ಮಸಾಗರದ ನನ್ನ ಗಂಡನ ಮನೆಯಲ್ಲಿ ಇದ್ದೆನು.

ಘಟನೆಯು ಹೊಲದಲ್ಲಿ ನಡೆದಿರುತ್ತದೆ. ನಾನು ಹೋಗುವುದರೊಳಗೆ ಮೃತ ನೀಲವ್ವಳನ್ನು ಮತ್ತು ಮೈದುನನ್ನು ಕಡೆದಿದ್ದರು. ಹೊಲವು ನಮ್ಮ ಮನೆಯ ಹಿಂದೆ ಇದ್ದುದರಿಂದ ನಾನು ತಕ್ಷಣವೇ ಘಟನಾ ಸ್ಥಳಕ್ಕೆ ಹೋಗಿರುತ್ತೇನೆ. ನಾನು ಹೋದ ನಂತರ ಉಳಿದವರು ಬಂದಿರುತ್ತಾರೆ. ಉಳಿದವರೆಲ್ಲರೂ ಘಟನೆ ನಡೆದ ನಂತರ ಬಂದಿರುತ್ತಾರೆ.

12. ಮೃತ ನೀಲವ್ವಳನ್ನು ಮತ್ತು ಮೈದುನನ್ನು ಆ್ಯಂಬುಲೆನ್ಸನಲ್ಲಿ ಬದಾಮಿಯ ಜಿಲ್ಲಾ ಆಸ್ಪತ್ರೆಗೆ ಪ್ರಾಸಾ-8 ರವರು ಕರೆದುಕೊಂಡು ಹೋಗಿರುತ್ತಾರೆ. ನನ್ನ ಮೈದುನ ಮಲ್ಲಪ್ಪ ತೀರಿಕೊಂಡಿದ್ದಾರೆ ಎಂದು ಪ್ರಾಸಾ-8 ರವರು ನನಗೆ ಫೋನ ಮಾಡಿ ತಿಳಿಸಿರುತ್ತಾರೆ. ಆಗ ನಾನು ಮನೆಯಲ್ಲಿ ಇದ್ದೆನು. ನಾನು ಆಸ್ಪತ್ರೆಗೆ ಹೋಗಿರುವುದಿಲ್ಲ.

13. ಮೃತ ನೀಲವ್ವ ಮತ್ತು ಮೃತ ಮಲ್ಲಪ್ಪ ಇವರನ್ನು ಹೊಡೆದು ಸಾಯಿಸುವುದನ್ನು ನಾನು ಕಣ್ಣಾರೆ ನೋಡಿರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಸ್ವತಃ ನಾನು ನಮ್ಮ ಮನೆಯ ಕಿಟಕಿಯಿಂದ ನೋಡಿರುತ್ತೇನೆ ಎಂದು ಹೇಳಿರುತ್ತಾರೆ. ನಾನು ಹೊಲ ಮನೆ ಕೆಲಸವನ್ನು ಮಾಡುತ್ತೇನೆ. ಒಕ್ಕಲುತನಕ್ಕೆ ಯಾವ ಯಾವ ಸಾಮಾನುಗಳು ಬೇಕಾಗುತ್ತವೆ ಎಂದು ನನಗೆ ಗೊತ್ತು. ಬಡಿಗೆ ಮತ್ತು ಬಾಯಿಗುದ್ಲಿ ಎಂದರೆ ನನಗೆ ಗೊತ್ತು.

14. ಮೃತ ನೀಲವ್ವಳನ್ನು ಕಡಿದು ಹೋಗಿರುತ್ತಾರೆಂದು ಗೊತ್ತಾಗಿ, ಪ್ರಾಸಾ-9 ರವರು ಅಲ್ಲಿಗೆ ಹೋಗಿರುತ್ತಾರೆ. ಪ್ರಾಸಾ-9 ರವರಿಗೆ ಯಾರು ಏನು ಮಾಡಿರುತ್ತಾರೆಂದು ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ಬಡಿಗೆ ಬೇರೆ ಮತ್ತು ಬಾಯಿಗುದ್ಲಿ ಬೇರೆ ಎಂದು ನನಗೆ ಗೊತ್ತಿದೆ. ಮೃತ ಮಲ್ಲಪ್ಪನಿಗೆ ಹೊಡೆದಾಗ ಆತನು ಹೊಲದಲ್ಲಿ ಇದ್ದನು. ಪ್ರಾಸಾ-9 ರವರಿಗೆ ಹೊಡೆದಾಗ ಆತನೂ ಕೂಡಾ ಹೊಲದಲ್ಲಿ ಇದ್ದನು. ಮೃತ ಮಲ್ಲಪ್ಪ ಮತ್ತು ಪ್ರಾಸಾ-9 ರವರಿಗೆ ಹೊಲದಲ್ಲಿ ಹೊಡೆಯಲಾಗಿರುತ್ತದೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮೃತ ಮಲ್ಲಪ್ಪ ಮತ್ತು ಪ್ರಾಸಾ-9 ರವರಿಗೆ ಹೊಡೆಯುವುದನ್ನು ನಾನು ನೋಡಿರುವುದಿಲ್ಲ ಎಂದರೆ ಸರಿಯಲ್ಲ.

15. ನಾನು ಪೋಲೀಸ ಠಾಣೆಗೆ ಬೆಳಿಗ್ಗೆ 10.00 ಗಂಟೆಗೆ ಪೋಲೀಸರ ಜೊತೆಗೆ ಹೋಗಿರುತ್ತೇನೆ. ಬಹಳ ಜನ ಪೋಲೀಸರು ಇದ್ದರು. ನಾನು ದೂರನ್ನು ಪೋಲೀಸ ಠಾಣೆಯಲ್ಲಿ ಕೊಟ್ಟಿರುತ್ತೇನೆ. ನಾನು ಶಾಲೆಗೆ ಹೋಗಿರುವುದಿಲ್ಲ. ದೂರನ್ನು ಬರೆದು ಕೊಡಲಾಗಿದೆ. ದೂರನ್ನು ಪೋಲೀಸರು ಬರೆದಿರುತ್ತಾರೆ. ಚಾಸಾ-16 ರವರು ದೂರನ್ನು ಹೇಳಿ ಬರೆಸಿರುತ್ತಾರೆ. ದೂರಿಗೆ ಚಾಸಾ-16 ರವರು ಸಹಿ ಮಾಡಿರುತ್ತಾರೆ. ನಾನೂ ಕೂಡಾ ದೂರಿಗೆ ಸಹಿ ಮಾಡಿರುತ್ತೇನೆ. ದೂರನ್ನು ಪೋಲೀಸರು ನನಗೆ ಮತ್ತು ಚಾಸಾ-16 ರವರಿಗೆ ಓದಿ ಹೇಳಿರುತ್ತಾರೆ. ದೂರಿನಲ್ಲಿ ಬರೆದಿದ್ದನ್ನು ಓದಿ ಹೇಳಿದ ನಂತರ ತಿಳಿದುಕೊಂಡು ಅದಕ್ಕೆ ಸಹಿ ಮಾಡಿರುತ್ತೇನೆ. ದೂರಿನಲ್ಲಿ ಬಡಿಗೆ ಮತ್ತು

ಬಾಯಿಗುದ್ದಿಗಳ ಬಗ್ಗೆ ಹೇಳಿರುವುದಿಲ್ಲ ಎಂದರೆ ಸರಿಯಲ್ಲ.

16. ಪ್ರಾಸಾ-9 ರವರಿಗೆ ಬಾಯಿಗುದ್ದಿ ಮತ್ತು ಕೊಡ್ಲಿಯಿಂದ ಹೊಡೆದಿರುತ್ತಾರೆ ಎಂದು ದೂರಿನಲ್ಲಿ ಹೇಳಿ ಬರೆಸಿರುತ್ತೇನೆ. ದೂರಿನಲ್ಲಿ ಬಡಿಗೆಯಿಂದ ಹೊಡೆದಿರುತ್ತಾರೆಂದು ಬರೆಸಿರುವುದಿಲ್ಲ. ಬಾಯಿಗುದ್ದಿಯಿಂದ ಪ್ರಾಸಾ-9 ರವರ ಕುತ್ತಿಗೆಯ ಹಿಂಭಾಗಕ್ಕೆ ಹೊಡೆದಿರುತ್ತಾರೆ. ಕೊಡ್ಲಿಯಿಂದ ಪ್ರಾಸಾ-9 ರವರ ತಲೆಗೆ ಹೊಡೆದಿರುತ್ತಾರೆ. ಪ್ರಾಸಾ-9 ರವರಿಗೆ ಯಾರೂ ಕೂಡಾ ಕೊಡ್ಲಿಯಿಂದ ಮತ್ತು ಬಾಯಿಗುದ್ದಿಯಿಂದ ಹೊಡೆದಿರುವುದಿಲ್ಲ ಎಂದರೆ ಸರಿಯಲ್ಲ.

17. ನಾನು ನೋಡಿದಾಗ ಮೃತ ದೇಹದ ರುಂಡ ಮತ್ತು ಮುಂಡರ ಬೇರೆಯಾಗಿತ್ತು ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅವಾಚ್ಯ ಶಬ್ದದಿಂದ ಬೈದಿರುತ್ತಾರೆ ಮತ್ತು ಕೊಡ್ಲಿಯಿಂದ 1 ನೇ ಆರೋಪಿ ಕಡೆದಿರುತ್ತಾನೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮೃತ ಮಲ್ಲಪ್ಪನನ್ನು ಕೂಡಾ 1 ಮತ್ತು 2 ನೇ ಆರೋಪಿಗಳು ಕೊಡ್ಲಿಯಿಂದ ಕಡೆದಿರುತ್ತಾರೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

18. ಮೃತ ನೀಲವ್ವಳಿಗೆ ಏನಾಯಿತು ಎಂದು ನಾನು ನೋಡಿರುವುದಿಲ್ಲ ಎಂದರೆ ಸರಿಯಲ್ಲ. ಮೃತ ಮಲ್ಲಪ್ಪನನ್ನು ಆ್ಯಂಬುಲೆನ್ಸನಲ್ಲಿ ಜನರು ಹಾಕಿರುತ್ತಾರೆ. ಪ್ರಾಸಾ-9 ರವರನ್ನೂ ಕೂಡಾ ಜನರು ಆ್ಯಂಬುಲೆನ್ಸನಲ್ಲಿ ಹಾಕಿರುತ್ತಾರೆ. ಸಾಕ್ಷಿ ಸ್ವತಃ ಪ್ರಾಸಾ-9 ರವರ ಹೆಂಡತಿ ಹಾಕಿರುತ್ತಾಳೆ ಎಂದು ಹೇಳಿರುತ್ತಾರೆ. ನಾನು ಮು.ಮಾ.1 ರಿಂದ 3 ನ್ನು ಇದೇ ಮೊದಲ ಸಾರಿ ನೋಡುತ್ತಿದ್ದೇನೆ ಎಂದರೆ ಸಾಕ್ಷಿಯು ಘಟನೆ ನಡೆದಾಗ ನೋಡಿದ್ದೇನೆ ಎಂದು ಹೇಳಿರುತ್ತಾರೆ. ಆ ದಿನ ನಾನು ಯಾವುದೇ ಟ್ರ್ಯಾಕ್ಟರನ್ನು ನೋಡಿರುವುದಿಲ್ಲ ಎಂದರೆ ಸರಿಯಲ್ಲ.

19. ಘಟನೆ ಬಗ್ಗೆ ನನಗೇನೂ ಗೊತ್ತಿಲ್ಲದೇ ಇದ್ದರೂ ತೀರಿಕೊಂಡವರು ನನ್ನ ಅತ್ತೆ ಮತ್ತು ಮೈದುನ ಆಗಿದ್ದರಿಂದ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ದಿನ ನಾನು, ಪ್ರಾಸಾ-2, ಚಾಸಾ-16 ರವರು ಸೇರಿ ನ್ಯಾಯಾಲಯಕ್ಕೆ ಬಂದಿರುತ್ತೇವೆ. ಹಿಂದೆಯೂ ಕೂಡಾ ನಾವು ಮೂರು ಜನ ನ್ಯಾಯಾಲಯಕ್ಕೆ ಬಂದಿದ್ದೆವು. ನನಗೆ ಹೇಳಿಕೊಟ್ಟಂತೆ ನಾನು ನ್ಯಾಯಾಲಯದಲ್ಲಿ ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ – ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ, ನನ್ನ ಉಕ್ತ ಲೇಖನದಂತೆ, ಸಾಕ್ಷಿಯ ಸಾಕ್ಷವನ್ನು ಬೆರಳಚ್ಚು ಮಾಡಿಸಲಾಯಿತು.)**

**ಓ ಹೇ ಕೇ ಸರಿ ಅದೆ.**

**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**

**ಗದಗ**

**ಪಿಡಬ್ಲು - 2**

ಅರ್ಜಿಯ ಆದೇಶದ ಮೇರೆಗೆ, ಪಿಡಬ್ಲು-2, ಬಸವ್ವ ಲಗಳಿ ರವರನ್ನು ರೂ. 600/- ಗಳ ಖರ್ಚಿನ ಮೇರೆಗೆ ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು - 09.06.2023

**ಪಾಟಿ ಸವಾಲುಃ ಶ್ರೀ ಎಂ.ಬಿ. ಗುಂಡವಾಡೆ, ಆರೋಪಿತರ ಪರ ವಕೀಲರಿಂದಃ**

5. ಶವದ ಪಂಚನಾಮೆ ಮಾಡುವಾಗ ನಾನು ಇದ್ದೆನು. ಪಂಚನಾಮೆಯಲ್ಲಿ ಏನೇನು ಬರೆದುಕೊಂಡಿರುತ್ತಾರೆಂದು ನನಗೆ ಗೊತ್ತಿಲ್ಲ. ಪಂಚನಾಮೆಯಲ್ಲಿ ಬರೆದಿರುವುದನ್ನು ಓದಿ ಹೇಳಿರುವುದಿಲ್ಲ. ಪಂಚನಾಮೆಯಲ್ಲಿ ಏನು ಬರೆದುಕೊಂಡಿರುತ್ತೀರಿ ಎಂದು ನಾನು ಪೋಲೀಸರನ್ನು ಕೇಳಿರುವುದಿಲ್ಲ. ನನ್ನ ಸಮಕ್ಷಮ ಮೃತ ನೀಲವ್ವಳ ಶವದ ಪಂಚನಾಮೆಯನ್ನು ಮಾಡಲಾಗಿರುತ್ತದೆ. ನಮ್ಮ ಮನೆಯಿಂದ ಘಟನಾ ಸ್ಥಳವು ಬಹಳ ದೂರದಲ್ಲಿ ಇರುತ್ತದೆ ಮತ್ತು ಮಧ್ಯದಲ್ಲಿ ಸಾಕಷ್ಟು ಮನೆಗಳು ಇರುತ್ತವೆ. ಆ ಸಮಯದಲ್ಲಿ ಸಾಕಷ್ಟು ಜನ ಹೆಣ್ಣುಮಕ್ಕಳು ಬಂದಿದ್ದರು. ನಾನು ಶವದ ಸಮೀಪ ಹೋಗಿರುವುದಿಲ್ಲ. ನನ್ನ ಮುಂದೆ ಜನರೂ ಕೂಡಾ ನಿಂತಿದ್ದರು.

6. ಮೃತ ನೀಲವ್ವಳಿಗೆ ಎಲ್ಲಿ ಗಾಯಗಳು ಆಗಿದ್ದವು ಎಂದು ನಾನು ನೋಡಿರುವುದಿಲ್ಲ. ಪೋಲೀಸರು ಹೇಳಿದ್ದರಿಂದ ನಾನು ಸಹಿ ಮಾಡಿರುತ್ತೇನೆ. ಅವರ ಮಧ್ಯ ಹೊಲ ಮನೆ ಜಗಳ ಇತ್ತು. ನಾನು ಪೋಲೀಸರ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ - ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ, ನನ್ನ ಉಕ್ತ ಲೇಖನದಂತೆ, ಸಾಕ್ಷಿಯ ಸಾಕ್ಷವನ್ನು ಬೆರಳಚ್ಚು ಮಾಡಿಸಲಾಯಿತು.)**

**ಓ ಹೇ ಕೇ ಸರಿ ಅದೆ.**

**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**

**ಗದಗ**